ದಿನಾಂಕಃ 12.08.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**:ಮುಂದುವರೆದ ಮುಖ್ಯ ವಿಚಾರಣೆ: ಪ್ರಾಜ್ಞ್ಯಾ.ಸ.ಸ.ಅ. ರವರಿಂದ:**

ಸಾಕ್ಷಿಯು 6 ಪೋಟೋಗಳನ್ನು ನೋಡಿ ಗುರುತಿಸಿ ಅದು ಅಪಘಾತ ಸ್ಥಳದಲ್ಲಿ ತೆಗೆದ ವಾಹನಗಳ ಪೋಟೋ ಹಾಗೂ ತಾವು, ಚಾಸಾ-4 ಮತ್ತು 5 ರವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಕಾಲಕ್ಕೆ ತೆಗೆದ ಪೋಟೋಗಳು ಎಂದು ಗುರುತಿಸಿದ್ದು, ಸದರಿ ಪೋಟೋಗಳನ್ನು ಸಿಡಿ ಮತ್ತು ಪ್ರಮಾಣಪತ್ರದೊಂದಿಗೆ ನಿಪಿ-7 ರಿಂದ 14 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ತಮಗೆ ಅಪಘಾತ ಪಡಿಸಿದ ವಾಹನದ ಚಾಲಕರು ಅವರೇ ಎಂದು ಗುರುತಿಸುತ್ತಾರೆ.

**ಪಾಟೀ ಸವಾಲು:ಆರೋಪಿ ಪರ ಶ್ರೀ ಡಿ.ಕೆ.ಪಿ. ವಕೀಲರಿಂದ:**

ನನ್ನ ಬಳಿ ಚಾಲನ ಪರವಾನಗೆ ಇದೆ. ಅದನ್ನು ಪೋಲಿಸರಿಗೆ ಕೊಟ್ಟಿದ್ದೇನೆ. ಅಪಘಾತವಾಯಿತು ಎಂದು ಹೇಳಲಾದ ರಸ್ತೆ ರಾಷ್ಟ್ರೀಯ ಹೆದ್ದಾರಿ ಎಂದರೆ ಸರಿ. ಚಿಕ್ಕಮಗಳೂರಿನಿಂದ ಧರ್ಮಸ್ಥಳ, ದಕ್ಷಿಣ ಕನ್ನಡ ಮತ್ತು ಕೇರಳಕ್ಕೆ ಹೋಗಲು ಅದೇ ರಾಷ್ಟ್ರೀಯ ಹೆದ್ದಾರಿಯಲ್ಲಿ ಹೋಗಬೇಕು ಎಂದರೆ ಸರಿ. ಆ ರಸ್ತೆಯಲ್ಲಿ ಪ್ರತೀದಿನ ಅನೇಕ ವಾಹನಗಳು ಸಂಚರಿಸುತ್ತವೆ ಎಂದರೆ ಸರಿ. ಆ ರಸ್ತೆ ಸುಮಾರು 50 ಅಡಿ ಅಗಲ ಇರಬಹುದು. ನನ್ನ ಮನೆಯಿಂದ ಸದರಿ ರಸ್ತೆ ಅಂದಾಜು 50 ಅಡಿ ದೂರದಲ್ಲಿ ಇರಬಹುದು. ನಮ್ಮ ಮನೆಯಿಂದ ಬೇಲಿಗೆ ಅಂದಾಜು 30 ಅಡಿ ಅಂತರ ಇರಬಹುದು. ನಮ್ಮ ಮನೆಗೆ ಕಟ್ಟಿಂಗ್ಸ್ ಗಿಡದ ಬೇಲಿ ಇದೆ ಎಂದರೆ ಸರಿ. ಸದರಿ ಕಟ್ಟಿಂಗ್ಸ್ ಗಿಡದ ಬೇಲಿ ಇರುವ ಕಾರಣ ನಮ್ಮ ಮನೆಯಿಂದ ರಸ್ತೆಗೆ ಬರಬೇಕಾದರೆ ರಸ್ತೆಯ ಎರಡೂ ದಿಕ್ಕುಗಳಲ್ಲೂ ಬರುವ ವಾಹನಗಳು ಕಾಣುವುದಿಲ್ಲ ಎಂದರೆ ಸರಿಯಲ್ಲ. ಬಿದರಹಳ್ಳಿಯಿಂದ ಬರುಬೇಕಾದರೆ ಘಟನಾ ಸ್ಥಳ ತಿರುವಿನಿಂದ ಇದೆ ಎಂದರೆ ಸರಿ. ನಮ್ಮ ಮನೆಯಿಂದ ರಸ್ತೆಗೆ ಬರಬೇಕಾದರೆ ತಿರುವಿನಿಂದ ಬರುವ ವಾಹಗಳು ಸಹಾ ಕಾಣುತ್ತವೆ.

ದಿ.18.06.2023 ರಂದು ಬೆ.9.15 ರ ಸಮಯಕ್ಕೆ ಆರೋಪಿಯು ತನ್ನ ಕಾರಿನಲ್ಲಿ ಮೂಡಿಗೆರೆಯಿಂದ ಉಜಿರೆ ಕಡೆ ಮಾರ್ಗವಾಗಿ ನನ್ನ ಮನೆಯ ಮುಂದಿನ ರಸ್ತೆಯಲ್ಲಿ ಹೋಗುತ್ತಿದ್ದರು ಎಂದರೆ ಸರಿ. ಆ ಸಮಯಕ್ಕೆ ನಾನೇ ನಮ್ಮ ಮನೆಯಿಂದ ಅಜಾಗರುಕತೆಯಿಂದ ವಾಹನದಲ್ಲಿ ಬಂದು ರಸ್ತೆಯ ಎಡ ಮತ್ತು ಬಲಭಾಗಕ್ಕೆ ನೋಡದೇ ಅಪಘಾತ ಪಡಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ತಪ್ಪು ಮತ್ತು ಅಜಾಗರುಕತೆಯಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ನನ್ನ ತಪ್ಪಿನಿಂದ ಅಪಘಾತವಾಗಿದೆ ಎಂದು ಆರೋಪಿ ನನ್ನ ವಿರುದ್ಧ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದು, ಅದು Cr.No.75/2023 ಎಂದು ದಾಖಲಾಗಿದೆ ಎಂದರೆ ಸರಿ. ನಾನು ಅಪಘಾತ ಪಡಿಸಿದ ಕಾರಣ ಆರೋಪಿಯ ಕಾರು ಜಖಂ ಆಗಿದೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನಾವು ಮೂಡಿಗೆರೆ ಆಸ್ಪತ್ರೆಗೆ ಬಂದಿದ್ದೆವು. ಸದರಿ ಆಸ್ಪತ್ರೆಯ ವೈದ್ಯರು ಅಪಘಾತದ ಬಗ್ಗೆ ಪೋಲಿಸರಿಗೆ ಇಂಟಿಮೇಷನ್ ಕಳುಹಿಸಿದ್ದರು, ಆದರೆ ಪೋಲಿಸರು ಆಸ್ಪತ್ರೆಗೆ ಬಂದಿರಲಿಲ್ಲ.

ನಾನು ಆಸ್ಪತ್ರೆಯಿಂದ ಡಿಸ್ ಚಾರ್ಜ್ ಆಗಿ ಮನೆಗೆ ಬಂದರೂ ಸಹಾ ಪೋಲಿಸರು ನನ್ನ ಹೇಳಿಕೆ ಪಡೆಯಲು ಬರದಿದ್ದ ಕಾರಣ ಪ್ರಕರಣ ದಾಖಲಾಗಿಲ್ಲ ಎಂದು ನನಗೆ ತಿಳಿಯಿತು. ಮೂಡಿಗೆರೆ

ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ನನ್ನ ಅಣ್ಣ ಚಾಸಾ-8 ರವರು ಬಂದಿದ್ದರು. ಅವರು ನಮ್ಮ ಜೊತೆ ಮಂಗಳೂರು ಆಸ್ಪತ್ರೆಗೆ ಬಂದ ಕಾರಣ ದೂರು ಕೊಟ್ಟಿಲ್ಲ. ನಾವು ಮಂಗಳೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ನನ್ನ ಮತ್ತೊಬ್ಬ ಅಣ್ಣ ಸಿರಿಲ್ ಸಾಲ್ಡಾನ ರವರು ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದು ಅದನ್ನು N.C., ಮಾಡಿದ್ದಾರೆ ಎಂದು ನಾನು ನ್ಯಾಯಾಲಯಕ್ಕೆ ದೂರು ಸಲ್ಲಿಸುವ ಮುಂಚೆ ತಿಳಿಯಿತು. ಸದರಿ N.C., ಗೆ ಸಂಬಂಧಪಟ್ಟ ದಾಖಲೆಗಳು ನನ್ನ ಬಳಿ ಇವೆ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ದಿ.29.06.2023 ರಂದು ನಾನು ಮಂಗಳೂರಿನ ಕೆ.ಎಸ್.ಹೆಗ್ಡೆ ಆಸ್ಪತ್ರೆಯಿಂದ ಡಿಸ್ ಚಾರ್ಜ್ ಆಗಿದ್ದು, ಸದರಿ ಆಸ್ಪತ್ರೆಯವರು ಅಲ್ಲಿನ ಉಲ್ಲಾಳ ಪೋಲಿಸ್ ಠಾಣೆಗೆ ಅಪಘಾತದ ಬಗ್ಗೆ ಇಂಟಿಮೇಷನ್ ಕಳುಹಿಸಿದ್ದರು. ಈ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾವು ಡಿಸ್ ಚಾರ್ಜ್ ಆದ ನಂತರ ಮೂಡಿಗೆರೆ ಪೋಲಿಸ್ ಠಾಣೆಗೆ ಹೋಗಿ ದೂರು ಕೊಡಲು ಪ್ರಯತ್ನಿಸಲಿಲ್ಲ.

ನನ್ನ ತಪ್ಪಿನಿಂದಲೇ ಅಪಘಾತವಾಗಿದ್ದ ಕಾರಣ ನಾನು ಯಾವುದೇ ದೂರು ಕೊಡಲು ಹೋಗಿರಲಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ PCR ದಾಖಲಿಸುವಾಗ ಅಪಘಾತದ ಪಡಿಸಿದ ವಾಹನದ ನೋಂದಣಿ ಸಂ.KA-4-AA-7012 ಎಂದು ಬರೆಸಿದ್ದೆ. ಪ್ರಕರಣದ ಸಂಬಂಧ ಪೋಲಿಸರು ನನ್ನ ಮತ್ತು ಆರೋಪಿಯ ವಾಹನಗಳನ್ನು ವಶಕ್ಕೆ ಪಡೆದಿದ್ದರ ಎಂದು ನನಗೆ ಸರಿಯಾಗಿ ಗೊತ್ತಿಲ್ಲ. ನಾನು ಚಾಲನೆ ಮಾಡುತ್ತಿದ್ದ ವಾಹನವನ್ನು ಪೋಲಿಸ್ ಠಾಣೆಯಿಂದ ನನ್ನ ತಂಗಿ ಬಿಡಿಕೊಂಡಿದ್ದಾರೆ. ಈ ರೀತಿ ನಾನು ಕೆ.ಎಸ್. ಹೆಗ್ಡೆ ಆಸ್ಪತ್ರೆಯಿಂದ ಡಿಸ್ ಚಾರ್ಜ್ ಆದ ನಂತರ ವಾಹನ ಬಿಡಿಸಿಕೊಂಡಿದ್ದಾರೆ. ನನ್ನ ತಂಗಿ ಮತ್ತು ನನ್ನ ಅಣ್ಣ ಸಿರಿಲ್ ಸಾಲ್ಡಾನ ಒಟ್ಟಿಗೆ ಪೋಲಿಸ್ ಠಾಣೆಗೆ ಹೋಗಿದ್ದು ಸಿರಿಲ್ ಸಾಲ್ಡಾನರವರ ಹೆಸರಿನಲ್ಲಿ ದೂರು ಕೊಡಲಾಗಿತ್ತು. ನಾನು ಸಂಚಾರಿ ನಿಯಮ ಪಾಲಿಸದೇ ವಾಹನವನ್ನು ಅಜಾಗರುಕತೆಯಿಂದ ಚಾಲನೆ ಮಾಡಿದ ಪರಿಣಾಮ ಅಪಘಾತವಾಗಿದೆ ಎಂದರೆ ಸರಿಯಲ್ಲ. ಈ ಕಾರಣ ಪೋಲಿಸರು ಸ್ಥಳ ಪರಿಶೀಲನೆ ಮಾಡಿದ ನಂತರ ನನ್ನ ವಿರುದ್ಧ ಪ್ರ.ವ.ವರದಿ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ.

ವಿಮಾ ಪರಿಹಾರ ಹಣ ಪಡೆಯುವ ಉದ್ದೇಶಕ್ಕಾಗಿ ನಾನು ಸುಳ್ಳು ದೂರು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರದಲ್ಲಿ ನನಗೆ ಸಹಾಯ ಮಾಡುವ ಉದ್ದೇಶದಿಂದ ಪೋಲಿಸರು ಸುಳ್ಳು ದೋ.ಪ. ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಪರಕರಣಕ್ಕೋಸ್ಕರ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.